ಪಿಡಬ್ಲ್ಯೂ: 6

# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. 117/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಶಾಂತ ಕೊಠರಕರ |
| ತಂದೆಯ ಹೆಸರು | : | ಕುಶಾಲಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಹೆಚ್.ಸಿ.–1325, ಕಾರವಾರ ನಗರ ಪೊಲೀಸ್ ಠಾಣೆ |
| ವಾಸ್ತವ್ಯ | : | ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ **10–08–2022**

## ದಂಡ ಪ್ರಕ್ರಿಯೇ ಸಂಹಿತೆ ಕಲಂ. 299 ರಡಿ ಸಾಕ್ಷಿಯ ಹೇಳಿಕೆಃ

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ನಾನು ಕಳೆದ 3 ವರ್ಷಗಳಿಂದ ಕಾರವಾರ ನಗರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ –1325 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 28–02–2022 ರಂದು ಈ ಪ್ರಕರಣದಲ್ಲಿ ಹೊರಡಿಸಿದ ಉದ್ಘೋಷಣಾ ವಾರಂಟ್ ನ್ನು ಪಡೆದುಕೊಂಡು ದಿಃ 09–03–2022 ರಂದು ಉದ್ಘೋಷಣಾ ವಾರಂಟ್ ನ ಪ್ರತಿಯನ್ನು ಆರೋಪಿಯು ವಾಸವಾಗಿದ್ದ ಮಡಗಾಂವಗೆ ಹೋಗಿ ಉದ್ಘೋಷಣೆ ಮಾಡಿರುತ್ತೇನೆ.

ಮಡಗಾಂವ ಬಸ್ ನಿಲ್ದಾಣ, ರೀಕ್ಷಾ ಸ್ಟಾಂಡ್, ನಗರ ಸಭೆ, ರೈಲ್ವೆ ನಿಲ್ದಾಣಕ್ಕೆ ಭೇಟಿ ಕೊಟ್ಟು ಅಲ್ಲಿಯು ಸಹ ಉದ್ಘೋಷಣಾ ವಾರಂಟ್ ನ್ನು ಅಂಟಿಸಿರುತ್ತೇನೆ.

ಈ ಬಗ್ಗೆ ನಾನು ದಿಃ 09–03–2022 ರಂದು ಬೆಳಿಗ್ಗೆ 9–30 ರಿಂದ 11–00 ಗಂಟೆಯ ತನಕ ಉದ್ಘೋಷಣೆ ಮಾಡಿದ್ದ ಬಗ್ಗೆ ಪಂಚನಾಮೆಯನ್ನು ಮಾಡಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪಿಡಬ್ಲ್ಯೂ: 6

ನಾನು ಸ್ವೀಕರಿಸಿದ ಸದ್ರಿ ಉಧ್ಘೋಷಣಾ ವಾರಂಟ್ ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ನಾನು ತಯಾರಿಸಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.2 ಎಂದೂ, ನನ್ನ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.3 ಎಂದೂ , ನನ್ನ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಮುಖ್ಯ ನಾಯಿಕ ದಂಡಾಧಿಕಾರಿಗಳು,

ಕಾರವಾರ